ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-12-1991.

# *ಪ್ರತಿ ಕರ್ಮದಲ್ಲಿ ಪ್ರಮಾಣಿಕತೆಯ ಪ್ರಯೋಗ ಮಾಡುವುದೇ ತಪಸ್ಸು*

(हर कर्म में ऑनेस्टी का प्रयोग करना ही तपस्या है)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಅವ್ಯಕ್ತ ಬಾಪ್‌ದಾದಾ ತನ್ನ ಪ್ರಾಮಾಣಿಕ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾ ಸರ್ವತಪಸ್ವೀ ಕುಮಾರ ಮತ್ತು ತಪಸ್ವೀ ಕುಮಾರಿಯರಲ್ಲಿ ತಪಸ್ಸಿನ ವಿಶೇಷ ಚಿಹ್ನೆಗಳನ್ನು ನೋಡುತ್ತಿರುವರು. ತಪಸ್ವಿ ಆತ್ಮರ ವಿಶೇಷತೆಗಳನ್ನು ಮೊದಲೂ ತಿಳಿಸಿದ್ದೇವೆ.ಇಂದು ಇನ್ನೂ ವಿಶೇಷತೆಯನ್ನು ತಿಳಿಸುತ್ತೇವೆ. ತಪಸ್ವೀ ಆತ್ಮ ಅರ್ಥಾತ್ ಸದಾ ಪ್ರಾಮಾಣಿಕ ಆತ್ಮ. ಪ್ರಾಮಾಣಿಕತೆಯೇ ತಪಸ್ವಿಯ ವಿಶೇಷತೆ ಆಗಿದೆ. ಪ್ರಾಮಾಣಿಕ ಆತ್ಮ ಅರ್ಥಾತ್ ಪ್ರತಿ ಕರ್ಮದಲ್ಲಿ. ಶ್ರೀಮತದಂತೆ ನಡೆಯುವುದರ ಪ್ರಾಮಾಣಿಕರಾಗಿರುತ್ತಾರೆ. ಪ್ರಾಮಾಣಿಕ ಅರ್ಥಾತ್ ನಂಬಿಕಸ್ತರು ಮತ್ತು ವಿಶ್ವಾಸ ಪಾತ್ರರು. ಶ್ರೀಮತದಂತೆ ನಡೆಯುವುದರಲ್ಲಿ ಪ್ರಾಮಾಣಿಕ ಆತ್ಮ ಸ್ವತಃ ಪ್ರತಿ ಹೆಜ್ಜೆ ಶ್ರೀಮತದ ಪ್ರೇರಣೆಯ ಪ್ರಮಾಣ ಇಡುತ್ತಾರೆ. ಅವರ ಪ್ರತೀ ಹೆಜ್ಜೆಯು ತಾನಾಗಿಯೇ ಶ್ರೀಮತದ ಪ್ರಮಾಣ ನಡೆಯುತ್ತದೆ. ವಿಜ್ಞಾನದ ಶಕ್ತಿಯಿಂದ ಅನೇಕ ವಸ್ತುಗಳು ಸ್ವಯಂಚಾಲಿತ ಆಗಿರುತ್ತವೆ. ನಡೆಸಬೇಕಾಗಿಲ್ಲ, ವಿದ್ಯುತ್ತಿನ ಮೂಲಕ ಅಥವಾ ಪ್ರಕಂಪನಗಳ ಮೂಲಕ ಸ್ವಿಚ್ ಹಾಕಿದಾಗ ಪ್ರಾರಂಭ ಆಗುತ್ತವೆ. ಆದರೆ ವಿಜ್ಞಾನದ ಶಕ್ತಿ ವಿನಾಶಿಯಾಗಿರುವುದರಿಂದ ಅಲ್ಪಕಾಲದವರೆಗೆ ನಡೆಯುತ್ತದೆ. ಅವಿನಾಶಿತಂದೆಯ ಮೂಲಕ ಈ ಬ್ರಾಹ್ಮಣ ಜೀವನದಲ್ಲಿ ಸದಾ ಮತ್ತು ಸ್ವತಹ ಸಹಜ ನಡೆಯುತ್ತಾರೆ. ಬ್ರಾಹ್ಮಣ ಜೀವನ ಪಡೆದಾಗಲೇ ದಿವ್ಯ ಬುದ್ಧಿಯಲ್ಲಿ ಬಾಪ್‌ದಾದಾ ಶ್ರೀಮತವನ್ನು ತುಂಬಿದರು. ಪ್ರಾಮಾಣಿಕ ಆತ್ಮ ಅದೇ ಶ್ರೀಮತದ ಪ್ರೇರಣೆಯ ಅನುಸಾರ ಸ್ವಾಭಾವಿಕವಾಗಿ ಸಹಜವಾಗಿ ನಡೆಯುತ್ತಾರೆ. ಹೀಗೆ **ಪ್ರಾಮಾಣಿಕತೆಯ ಮೊದಲನೆ ಚಿಹ್ನೆಯಾಗಿದೆ- ಪ್ರತೀ ಹೆಜ್ಜೆ, ಪ್ರತೀ ಸೆಕೆಂಡ್ ಶ್ರೀಮತದನುಸಾರ ಸರಿಯಾಗಿ ನಡೆಯುವುದು. ಎಲ್ಲರೂ**

**ನಡೆಯುತ್ತಾರೆ ಆದರೆ ನಡೆಯುತ್ತಿದ್ದರೂ ಅನೇಕ ಪ್ರಕಾರದ ಭಿನ್ನತೆ ಬರುತ್ತದೆ. ಕೆಲವರು ಸಹಜ ಮತ್ತು ತೀವ್ರಗತಿಯಿಂದ ನಡೆಯುತ್ತಾರೆ ಏಕೆಂದರೆ ಆ ಆತ್ಮಕ್ಕೆ ಶ್ರೀಮತ ಸದಾ ಸ್ಪಷ್ಟ ಸ್ಮೃತಿಯಲ್ಲಿರುವ ಕಾರಣ ಸಮರ್ಥ ಆಗಿರುತ್ತಾರೆ. ಇದೇ ನಂಬರ್‌ಒನ್ ಪ್ರಾಮಾಣಿಕತೆಯಾಗಿದೆ. ಇದು ಶ್ರೀಮತ ಹೌದೊ ಅಲ್ಲವೊ, ಇದು ಸರಿಯೋ ಅಥವಾ ತಪ್ಪೋ ಎಂದು ನಂಬರ್‌ಒನ್ ಆತ್ಮ ವಿಚಾರ ಮಾಡಬೇಕಾಗಿಲ್ಲ, ಏಕೆಂದರೆ ಸ್ಪಷ್ಟ ಇದೆ. ಎರಡನೇ ಆತ್ಮಕ್ಕೆ ಸ್ಪಷ್ಟವಿಲ್ಲದಕಾರಣ ವಿಚಾರ ಮಾಡಬೇಕಾಗುತ್ತದೆ. ಆದ್ದರಿಂದ ತೀವ್ರ ಗತಿಯಿಂದ ಮಧ್ಯಮಗತಿ ಆಗುತ್ತದೆ. ಜೊತೆ ಜೊತೆಗೆ ಕೆಲವರು ವಿಚಾರ ಮಾಡುತ್ತಾರೆ. ಕೆಲವರು ಸುಸ್ತಾಗುತ್ತಾರೆ. ಏಕೆ ಸುಸ್ತಾಗುತ್ತಾರೆ? ನಡೆಯುತ್ತಾ ನಡೆಯುತ್ತಾ ಶ್ರೀಮತದ ಸನ್ನೆಯಲ್ಲಿ ಮನ್ಮತ, ಪರಮತ ಸೇರಿಸಿಬಿಡುತ್ತಾರೆ, ಆದ್ದರಿಂದ ಸ್ವಚ್ಛ ಮತ್ತು ನೇರದಾರಿಯನ್ನು ಬಿಟ್ಟು ಅಂಕುಡೊಂಕಾದ ದಾರಿಯಲ್ಲಿ ಹೋಗುತ್ತಾರೆ. ಪರಿಣಾಮದಲ್ಲಿ ಪುನಃ ತಿರುಗಿ ಬರಲೇಬೇಕಾಗುತ್ತದೆ ಏಕೆಂದರೆ ಗುರಿ ತಲುಪಲು ದಾರಿ ಒಂದೇ ಸ್ಪಷ್ಟ ಮತ್ತು ಸಹಜ ಆಗಿದೆ. ನೇರ ಇರುವುದನ್ನು ಅಂಕುಡೊಂಕು ಮಾಡಿಬಿಡುತ್ತಾರೆ ಅಂದಮೇಲೆ ವಿಚಾರ ಮಾಡಿರಿ- ಅಂಕುಡೊಂಕಾಗಿ ನಡೆಯುವವನು ಎಲ್ಲಿಯವರೆಗೆ ನಡೆಯಬಲ್ಲ. ಯಾವ ಗತಿಯಲ್ಲಿ ನಡೆಯಬಲ್ಲ? ಮತ್ತು ಪರಿಣಾಮವೇನಾಗುವುದು? ಸುಸ್ತಾಗುವುದು ಮತ್ತು ನಿರಾಶರಾಗಿ ಹಿಂತಿರುಗುವುದು ಆದ್ದರಿಂದ ಎರಡನೇ ನಂಬರ್ ಆಗುತ್ತದೆ. ಅನೇಕ ಸೆಕೆಂಡ್ ಕಳೆದುಕೊಂಡರು, ಅನೇಕ ಶ್ವಾಸ ಕಳೆದುಕೊಂಡರು, ಸರ್ವಶಕ್ತಿಗಳನ್ನು ಕಳೆದುಕೊಂಡರು. ಆದ್ದರಿಂದ ಎರಡನೆ ನಂಬರ್ ಆಯಿತು.** ನಾವಂತೂ ನಡೆಯುತ್ತಿದ್ದೇವೆ ಎಂದಷ್ಟೇ ಖುಷಿ ಪಡಬೇಡಿ. ಆದರೆ ನಿಮ್ಮ ನಡಿಗೆ ಮತ್ತು ಗತಿ ಎರಡನ್ನೂ ಪರಿಶೀಲನೆ ಮಾಡಿಕೊಳ್ಳಿರಿ. ಪ್ರಾಮಾಣಿಕತೆ ಎಂದು ಯಾವುದಕ್ಕೆ ಹೇಳುತ್ತಾರೆ-ತಿಳಿಯಿತೇ?

**ಪ್ರಾಮಾಣಿಕ ಆತ್ಮದ ಮತ್ತೊಂದು ಚಿಹ್ನೆಯಾಗಿದೆ- ಅವರು ಎಂದೂ ಯಾವುದೇ ಖಜಾನೆಯನ್ನು ವ್ಯರ್ಥ ಮಾಡುವುದಿಲ್ಲ.** ಕೇವಲ ಸ್ಥೂಲಧನ ಅಥವಾ ಖಜಾನೆ ಅಷ್ಟೇ ಅಲ್ಲ ಆದರೆ ಇನ್ನೂ ಅನೇಕ ಖಜಾನೆಗಳು ನಿಮಗೆ ಸಿಕ್ಕಿವೆ. ಪ್ರಾಮಾಣಿಕರಾದವರು ಸಂಗಮಯುಗದ ಆ ಖಜಾನೆಯ ಒಂದು ಸೆಕೆಂಡನ್ನೂ ಸಹ ವ್ಯರ್ಥ ಕಳೆಯುವುದಿಲ್ಲ ಏಕೆಂದರೆ ಸಂಗಮಯುಗದ ಒಂದೊಂದು ಸೆಕೆಂಡ್ ವರ್ಷಕ್ಕಿಂತಲೂ ಹೆಚ್ಚು, ಬಡವರ ಎಂಟುಆಣಿ ಎಂಟುನೂರು ರೂಪಾಯಿಗೆ ಸಮನಾಗಿರುತ್ತದೆ ಏಕೆಂದರೆ ಎಂಟುಆಣೆಯಲ್ಲಿ ಸತ್ಯ ಹೃದಯದ ಭಾವನೆ ಎಂಟು ನೂರಕ್ಕಿಂತ ಹೆಚ್ಚು ಇರುತ್ತದೆ. ಅದೇರೀತಿ ಸಂಗಮಯುಗದ ಸಮಯದ ಒಂದು ಸೆಕೆಂಡ್ ಇಷ್ಟು ದೊಡ್ಡದು ಏಕೆಂದರೆ ಒಂದು ಸೇಂಡ್ ನಲ್ಲಿ ಪದಮದಷ್ಟು ಸಂಪಾದನೆಯಾಗುತ್ತದೆ. ಸೆಕೆಂಡ್ ಕಳೆದುಕೊಂಡರೆ ಪದಮದಷ್ಟು ಸಂಪಾದನೆ ಕಳೆದುಕೊಂಡಂತೆ. ಅದೇರೀತಿ ಸಂಕಲ್ಪದ ಖಜಾನೆ. ಜ್ಞಾನಧನದ ಖಜಾನೆ. ಸರ್ವಶಕ್ತಿಗಳ ಖಜಾನೆ, ಸರ್ವಗುಣಗಳ ಖಜಾನೆ ವ್ಯರ್ಥ ಮಾಡುವುದಿಲ್ಲ. ಸರ್ವಶಕ್ತಿಗಳನ್ನು, ಸರ್ವಗುಣಗಳನ್ನು ಮತ್ತು ಜ್ಞಾನವನ್ನು ಸ್ವಯಂನ ಪ್ರತಿ ಮತ್ತು ಸೇವೆಯ ಪ್ರತಿ ಕಾರ್ಯದಲ್ಲಿ ತೊಡಗಿಸದಿದ್ದರೆ ಅದೂ ಸಹ ವ್ಯರ್ಥವಾಗುತ್ತದೆ. ದಾತಾ ಕೊಟ್ಟರು ಆದರೆ ತೆಗೆದುಕೊಳ್ಳುವವರು ಧಾರಣೆ ಮಾಡದಿದ್ದರೆ ಅದೂ ಸಹ ವ್ಯರ್ಥವಾಯಿತಲ್ಲವೆ! ಪ್ರಾಮಾಣಿಕ ಆಗಿರುವವರು ಧನವನ್ನು ಪ್ರಾಪ್ತಿ ಮಾಡಿಕೊಂಡು ಕೇವಲ ಇಟ್ಟುಕೊಳ್ಳುವುದಿಲ್ಲ. ಪ್ರಾಮಾಣಿಕತೆಯ ಜಿಹ್ನೆಯಾಗಿದೆ- ಖಜಾನೆಯನ್ನು ಹೆಚ್ಚು ಮಾಡುವುದು. ಜ್ಞಾನಧನವನ್ನೂ ಸಹ ಸಮಯ ಪ್ರಮಾಣ ಸರ್ವಾತ್ಮರಪ್ರತಿ ಅಥವಾ ಸ್ವ-ಉನ್ನತಿಯ ಪ್ರತಿ ಉಪಯೋಗ ಮಾಡದಿದ್ದರೆ ಖಜಾನೆ ಎಂದೂ ಹೆಚ್ಚುವುದಿಲ್ಲ. ಯಾವುದೇ ಕಾರ್ಯದಲ್ಲಿ ಲಾಭ ಮಾಡಿ ತೋರಿಸುವವರಿಗೆ ಪ್ರಾಮಾಣಿಕ ಮ್ಯಾನೇಜರ್ ಅಥವಾ ಡೈರೆಕ್ಟರ್ ಎಂದು ಹೇಳಲಾಗುತ್ತದೆ. ಪ್ರಗತಿ ಮಾಡಿ ತೋರಿಸಬೇಕು. ಇದೇರೀತಿ ಸಂಕಲ್ಪದ ಖಜಾನೆಯನ್ನು, ಶಕ್ತಿಗಳನ್ನು, ಗುಣಗಳನ್ನು ಕಾರ್ಯದಲ್ಲಿ ತೊಡಗಿಸಿ ಲಾಭ ಮಾಡಿ ತೋರಿಸುವವರಾಗಿರುವಿರೊ ಅಥವಾ ವ್ಯರ್ಥ ಮಾಡುವವರೋ? ಪ್ರಾಮಾಣಿಕತೆಯ ಜಿಹ್ನೆಯಾಗಿದೆ- ವ್ಯರ್ಥ ಮಾಡುವುದಲ್ಲ, ಲಾಭ ಮಾಡುವುದು. ನಿಮ್ಮ ತನು, ಮನ ಮತ್ತು ಸ್ಥೂಲಧನ- ಈ ಮೂರು ತಂದೆ ಕೊಟ್ಟಿರುವ ಖಜಾನೆಯಾಗಿದೆ. ನೀವೆಲ್ಲರೂ ತನು-ಮನ-ಧನ ಏನೆಲ್ಲಾ ಇತ್ತೋ ಅದನ್ನು ಅರ್ಪಣೆ ಮಾಡಿದಿರಿ. ಎಲ್ಲವೂ ನಿನ್ನದು ಎಂದು ಸಂಕಲ್ಪ ಮಾಡಿದಿರಿ. ಸ್ವಲ್ಪ ನನ್ನದು, ಸ್ವಲ್ಪ ತಂದೆಯದು ಎಂದಲ್ಲ, ಸ್ವಲ್ಪ ಧನವನ್ನು ಜೇಬು ಖರ್ಚಿಗೆ ಇಟ್ಟುಕೊಳ್ಳಬೇಕು. ಅಂತಹ ಸಮಯ ಬಂದರೆ ಬೇಕಾಗುತ್ತದೆಯೆಂದು ಎತ್ತಿಟ್ಟಿರುವಿರಾ. ಸಮಯಕ್ಕೆ ಬೇಕು ಎಂದು ಸ್ವಲ್ಪ

ತೆಗೆದಿಡುವುದು ಬುದ್ಧಿವಂತಿಕೆಯ ಕೆಲಸವಾಗಿದೆ. ಎಷ್ಟು ನನ್ನದು-ನನ್ನದು ಎಂದು ಇರುತ್ತದೆಯೋ ಅಷ್ಟು ತಿರುವುಮುರುವಾಗುತ್ತದೆ ಏಕೆಂದರೆ ಅದನ್ನು ಮುಚ್ಚಿಡಬೇಕಾಗುತ್ತದೆ ಅಲ್ಲವೆ! ಭಕ್ತಿಮಾರ್ಗದವರೂ ತಿಳಿಯುತ್ತಾರೆ- ಈ ನನ್ನದು ನನ್ನದು ಎಂಬುದು ಒಂದು ವಲಯವಾಗಿದೆ(ಚಕ್ರವಾಗಿದೆ). ಆದ್ದರಿಂದ ಎಲ್ಲವೂ ನಿನ್ನದು ಎಂದು ಹೇಳಿದ ಮೇಲೆ ಯಾವುದೂ ಸಹ ತನು-ಮನ-ಧನ, ವಸ್ತು, ಕೇವಲ ಧನ ಅಷ್ಟೇ ಅಲ್ಲ ವಸ್ತುಗಳೂ ಸಹ ಧನ ಆಗಿದೆ. ವಸ್ತು ಆಗುವುದು ಹೇಗೆ? ವಸ್ತು ಧನದಿಂದ ತಯಾರಾಗುವುದಲ್ಲವೇ ಆದ್ದರಿಂದ ಯಾವುದೇ ವಸ್ತು, ಯಾವುದೇ ಸ್ಥೂಲಧನ, ಮನಸ್ಸಿನ ಯಾವುದಾದರೂ ಸಂಕಲ್ಪ ಮತ್ತು ತನುವಿನಿಂದ ವ್ಯರ್ಥ ಕರ್ಮ ಮಾಡುವುದು ಅಥವಾ ತನುವಿನಿಂದ ವ್ಯರ್ಥ ಸಮಯ ಕಳೆಯುವುದೂ ಸಹ ವ್ಯರ್ಥ್ಯದಲ್ಲಿ ಸೇರಿಸಲ್ಪಡುತ್ತದೆ. ಪ್ರಾಮಾಣಿಕರಾದವರು ತನುವನ್ನೂ ಸಹ ವ್ಯರ್ಥದಲ್ಲಿ ತೊಡಗಿಸುವುದಿಲ್ಲ. ಸಂಕಲ್ಪವನ್ನೂ ವ್ಯರ್ಥದಲ್ಲಿ ತೊಡಗಿಸುವುದಿಲ್ಲ. ನೀವು ಎಲ್ಲಿಯೇ ಇರಬಹುದು, ಪ್ರವೃತ್ತಿಯವರೇ ಇರಬಹುದು, ಸೇವಾಕೇಂದ್ರದಲ್ಲಿಯೇ ಇರಬಹುದು. ಮಧುಬನದವರೇ ಇರಲಿ, ಎಲ್ಲರ ತನು-ಮನ-ಧನ ತಂದೆಯದಾಗಿದೆ ಅಥವಾ ಪ್ರವೃತ್ತಿಯವರು ನಾವು ಸಮರ್ಪಣೆ ಅಂತೂ ಆಗಿಲ್ಲ ಅಂದಮೇಲೆ ನನ್ನದು ಎಂದು ತಿಳಿಯುತ್ತೀರಾ? ಇಲ್ಲ. ಇದು ತಂದೆಯ ಸ್ವತ್ತಾಗಿದೆ. ಹೀಗೆ ಪ್ರಾಮಾಣಿಕತೆ ಅರ್ಥಾತ್ ಸ್ವತ್ತಿನಲ್ಲಿ ಎಂದೂ ಕೊರತೆ ತರಬಾರದು. ವ್ಯರ್ಥ ಮಾಡುವುದು ಅರ್ಥಾತ್ ಸ್ವತ್ತಿನಲ್ಲಿ ಕೊರತೆಯನ್ನು ತರುವುದು. ಸ್ವತ್ತಿನಲ್ಲಿ ಎಂದೂ 'ಕೊರತೆ ಮಾಡದಿರುವುದು ಪ್ರಾಮಾಣಿಕತೆಯ ಚಿಹ್ನೆಯಾಗಿದೆ. ಸಣ್ಣವಸ್ತುವನ್ನೂ ವ್ಯರ್ಥ ಮಾಡುವುದಿಲ್ಲ. ಅನೇಕಬಾರಿ ಬುದ್ಧಿಯ ಹುಡುಗಾಟಿಕೆಯಿಂದ ಅಥವಾ ಶರೀರದ ಮೂಲಕ ಕಾರ್ಯದಲ್ಲಿ ಹುಡುಗಾಟಿಕೆಯ ಕಾರಣದಿಂದ ಚಿಕ್ಕ-ಚಿಕ್ಕ ವಸ್ತುಗಳು ವ್ಯರ್ಥವಾಗುತ್ತವೆ. ನಂತರ ವಿಚಾರ ಮಾಡುತ್ತೀರಿ ನಾನು ಇದ್ದನ್ನು ಬೇಕೆಂತಲೇ ಮಾಡಲಿಲ್ಲ, ಆಗಿಬಿಟ್ಟಿತು ಅರ್ಥಾತ್ ಇದು ಹುಡುಗಾಟಿಕೆ ಆಗಿದೆ. ಬುದ್ಧಿಯದೇ ಆಗಿರಲಿ ಅಥವಾ ಶರೀರದ ಪರಿಶ್ರಮದ ಹುಡುಗಾಟಿಕೆಯೇ ಆಗಿರಲಿ. ಎರಡೂಪ್ರಕಾರದ ಹುಡುಗಾಟಿಕೆ ವ್ಯರ್ಥ ಮಾಡುತ್ತದೆ ಆದ್ದರಿಂದ ವ್ಯರ್ಥ ಮಾಡಬೇಡಿ. ಒಂದರಲ್ಲಿ ಹತ್ತುಪಟ್ಟು ಹೆಚ್ಚಿಸಬೇಕು. ವ್ಯರ್ಥ ಮಾಡಬಾರದು. ಅದಕ್ಕೆ ಬಾಪ್‌ದಾದಾ ಸದಾ ಒಂದು ಸ್ಲೋಗನ್ ಹೇಳುತ್ತಾರೆ- "ಕಡಿಮೆ ಖರ್ಚು ಹೆಚ್ಚು ಲಾಭ" ಇದು ಹೆಚ್ಚಿಸುವುದಾಗಿದೆ ಅದು ಕಳೆಯುವುದಾಗಿದೆ. ಪ್ರಾಮಾಣಿಕ ಅಂದರೆ ತನು-ಮನ-ಧನವನ್ನು ಸದಾ ಸಫಲ ಮಾಡುವುದು. ಇದಾಗಿದೆ ಪ್ರಾಮಾಣಿಕ ಆತ್ಮದ ಚಿಹ್ನೆ ಆದ್ದರಿಂದ ತಪಸ್ಸು ಅರ್ಥಾತ್ ಎಲ್ಲಾ ರೀತಿಯ ಪ್ರಾಮಾಣಿಕತೆಯ ವಿಶೇಷತೆ ಸದಾ ಪ್ರತಿ ಕಾರ್ಯದಲ್ಲಿಯೂ ಬರಬೇಕು. ಎಲ್ಲವೂ ಸಮಾವೇಶವಾಗಿದೆ. ಎಲ್ಲವೂ ತಿಳಿದುಕೊಂಡಿದ್ದೇವೆ, ಆದರೆ.....ಅಲ್ಲ. ತಪಸ್ಸು, ಯೋಗದ ಅರ್ಥವೇ ಆಗಿದೆ ಪ್ರಯೋಗದಲ್ಲಿ ತರುವುದು. ಈ ವಿಶೇಷತೆಗಳನ್ನು ಪ್ರಯೋಗದಲ್ಲಿ ತರದಿದ್ದರೆ ಪ್ರಯೋಗಿಯೂ ಅಲ್ಲ, ಅಂದಮೇಲೆ ಯೋಗಿಯೂ ಅಲ್ಲ. ಈ ಎಲ್ಲಾ ಖಜಾನೆಗಳನ್ನು ಬಾಪ್‌ದಾದಾರವರು ಪ್ರಯೋಗ ಮಾಡಲು ಕೊಟ್ಟಿರುವರು ಮತ್ತು ಎಷ್ಟು ಪ್ರಯೋಗ ಮಾಡುತ್ತೀರೋ, ಪ್ರಯೋಗದ ಚಿಹ್ನೆಯಾಗಿದೆ- ಪ್ರಗತಿ ಹೊಂದುವುದು. ಪ್ರಗತಿಯಾಗದಿದ್ದರೆ ಪ್ರಯೋಗಿಯೂ ಅಲ್ಲ. ನಾವು ಮುಂದುವರೆಯುತ್ತಲೂ ಇಲ್ಲ. ಹಿಂದಕ್ಕೂ ಹೋಗುತ್ತಿಲ್ಲ ಎಂದು ಅನೇಕ ಆತ್ಮರು ತಮ್ಮಲ್ಲೇ ತಿಳಿದುಕೊಳ್ಳುತ್ತಾರೆ. ಯಾವ ರೀತಿಯಿದ್ದೆವು ಅದೇರೀತಿ ಇದ್ದೇವೆ ಮತ್ತು ಇನ್ನೂ ಕೆಲವರು ನಾವು ಆರಂಭದಲ್ಲಿ ಬಹಳ ಚೆನ್ನಾಗಿದ್ದೆವು. ಬಹಳ ನಶೆಯಿತ್ತು, ಈಗ ನಶೆ ಕಡಿಮೆಯಾಗಿದೆ ಎಂದು ಹೇಳುತ್ತಾರೆ. ಹಾಗಾದರೆ ಪ್ರಗತಿ ಆಯಿತೋ ಅಥವಾ ಏನಾಯಿತು? ಹಾರುವಕಲೆ ಆಯಿತೋ ಅಥವಾ ನಿಲ್ಲುವ ಕಲೆಯಾಯಿತೋ? ಆದ್ದರಿಂದ ಪ್ರಯೋಗಿ ಆಗಿರಿ. ಪ್ರಾಮಾಣಿಕತೆಯ ಅರ್ಥವೇ ಆಗಿದೆ ಪ್ರಗತಿ ಮಾಡುವ ಪ್ರಯೋಗಿ. ಇಂತಹ ಪ್ರಯೋಗಿ ಆಗಿರುವಿರೋ ಅಥವಾ ಒಳಗೆ ಸಮಾವೇಶ ಮಾಡಿಟ್ಟುಕೊಂಡಿರುವಿರೊ? ಖಜಾನೆಯು ಒಳಗೆ ಸಮಾವೇಶವಾಗಿದ್ದರೆ ಕಾರ್ಯದಲ್ಲಿ ಬರಲೇ ಇಲ್ಲ, ಇಂತಹ ಪ್ರಾಮಾಣಿಕ ಆಗಿರುವಿರಾ?

ಪ್ರಾಮಾಣಿಕರಾಗಿರುವವರ ಮೇಲೆ ತಂದೆಯ ಮತ್ತು ಪರಿವಾರದವರ ಹೃದಯದ ಪ್ರೀತಿ ಮತ್ತು ವಿಶ್ವಾಸ ಸ್ವತಹ ಇರುತ್ತದೆ. ವಿಶ್ವಾಸದ ಕಾರಣ ಪೂರ್ಣಅಧಿಕಾರವನ್ನು ಅವರಿಗೆ ಕೊಟ್ಟುಬಿಡುತ್ತಾರೆ. ಪ್ರಾಮಾಣಿಕ ಆತ್ಮಕ್ಕೆ ಸ್ವತಃ ತಂದೆಯ ಮತ್ತು ಪರಿವಾರದ ಪ್ರೀತಿಯ ಅನುಭವ ಆಗುತ್ತದೆ. ದೊಡ್ಡವರ, ಚಿಕ್ಕವರ, ಸಮಾನರಾದವರ ವಿಶ್ವಾಸ ಪಾತ್ರದ ಅನುಭವವಾಗುತ್ತದೆ. ಇಂತಹ ವಿಶ್ವಾಸಪಾತ್ರರು ಎಷ್ಟರಮಟ್ಟಿಗೆ ಆಗಿದ್ದೇವೆ? ಇದನ್ನು ಪರಿಶೀಲನೆ ಮಾಡಿಕೊಳ್ಳಿ. ಈ ಕಾರಣದಿಂದ ನನ್ನಲ್ಲಿ ವಿಶ್ವಾಸ ಇಲ್ಲ. ನಾನು ಹೇಗೆ

ವಿಶ್ವಾಸಪಾತ್ರನಾಗಲಿ ಎಂದು ಹಾಗೆಯೇ ನಡೆಸಿಕೊಂಡು ಹೋಗಬೇಡಿ. ನಿಮ್ಮನ್ನು ಪಾತ್ರರನ್ನಾಗಿ ಮಾಡಿಕೊಳ್ಳಿ. ನಾನು ಒಳ್ಳೆಯವನು ಆದರೆ ನನ್ನ ಮೇಲೆ ವಿಶ್ವಾಸ ಇಲ್ಲ ಎಂದು ಕೆಲವರು ಹೇಳುತ್ತಾರೆ. ಅದರ ಕಾರಣವನ್ನೂ ಬಹಲ ಉದ್ದಗಲ ಮಾಡಿ ಹೇಳುತ್ತಾರೆ. ಅವರು ಕೆಲವು ಕಾರಣವನ್ನು ಹೇಳುತ್ತಾರೆ ಮತ್ತು ಕೆಲವು ಕಾರಣಗಳೂ ಸಹ ಆಗುತ್ತವೆ ಆದರೆ ಹೃದಯದ ಮತ್ತು ಬುದ್ಧಿಯ ಪ್ರಾಮಾಣಿಕತೆಯೂ ಸಹ ಬೇಕು. ಇಲ್ಲವಾದರೆ ಬುದ್ಧಿಯಿಂದ ಏರುಪೇರು ಬಹಳ ಮಾಡುತ್ತಾರೆ. ಆದ್ದರಿಂದ ಹೃದಯದಲ್ಲಿ ಇಮಾಣಿಕತೆ ಮತ್ತು ಬುದ್ಧಿಯ ಪ್ರಾಮಾಣಿಕತೆ ಎರಡೂ ಬೇಕು, ಎಲ್ಲಾ ಪ್ರಕಾರದ ಪ್ರಾಮಾಣಿಕತೆ ಇದ್ದರೆ ಅವಿಶ್ವಾಸ ಇರುವವನನ್ನೂ ಸಹ ಇಂದಿಲ್ಲದಿದ್ದರೆ ನಾಳೆ ವಿಶ್ವಾಸದಲ್ಲಿ ತರುತ್ತದೆ. ಹೇಗೆ **ಸತ್ಯದ ಹಡಗು ಅಲುಗಾಡುತ್ತದೆಯೇ ಹೊರತು ಮುಳುಗುವುದಿಲ್ಲ.** ಹಾಗೆಯೇ ವಿಶ್ವಾಸದ ನಾವೆ ಸತ್ಯತೆ ಆಗಿದೆ, ಪ್ರಾಮಾಣಿಕತೆ ಇದ್ದರೆ ಅಲುಗಾಡಬಹುದು ಆದರೆ ಅವಿಶ್ವಾಸಪಾತ್ರ ಆಗುವುದು ಅರ್ಥಾತ್ ಮುಳುಗುವುದಿಲ್ಲ. ಆದ್ದರಿಂದ ಸತ್ಯತೆ ಧೈರ್ಯದಿಂದ ವಿಶ್ವಾಸ ಪಾತ್ರರಾಗಲು ಸಾಧ್ಯ. ಮೊದಲೂ ತಿಳಿಸಲಾಗಿತ್ತಲ್ಲವೇ ಸತ್ಯವನ್ನು ಸಿದ್ಧಮಾಡಲು ಆಗುವುದಿಲ್ಲ. ಸತ್ಯ ಸ್ವಯಂ ಸಿದ್ಧವಾಗುತ್ತದೆ. ಸಿದ್ಧ ಮಾಡಬೇಡಿ ಆದರೆ ಸಿದ್ಧಿಸ್ವರೂಪರಾಗಿರಿ ಆದ್ದರಿಂದ ಈಗ ಸಮಯದ ಗತಿಯನುಸಾರ ಈಗ ತಪಸ್ಸಿನ ಹೆಜ್ಜೆಯನ್ನು ತೀವ್ರ ಗತಿಯಿಂದ ಮುಂದುವರೆಸಿರಿ. ತಿಳಿಯಿತೆ - ತಪಸ್ಯಾ ವರ್ಷದಲ್ಲಿ ಏನು ಮಾಡಬೇಕು ಎಂದು? ಇನ್ನೂ ಸ್ವಲ್ಪ ಸಮಯ ಉಳಿದಿದೆ. ಈ ಎಲ್ಲಾ ವಿಧಿಗಳನ್ನು ಧಾರಣೆ ಮಾಡಿ ಸಿದ್ಧಿ ಸ್ವರೂಪರಾಗಿರಿ. ಒಳ್ಳೆಯದು-

**ಸರ್ವ ಪ್ರಾಮಾಣಿಕ ಆತ್ಮರಿಗೆ, ಸದಾ ಸರ್ವ ಖಜಾನೆಗಳನ್ನು ಕಾರ್ಯದಲ್ಲಿ ತೊಡಗಿಸಿ ಮುಂದುವರೆಯುವಂತಹ ಆತ್ಮರಿಗೆ, ಸದಾ ತನು-ಮನ-ಧನವನ್ನು ಯಥಾರ್ಥ ವಿಧಿಯಿಂದ ಕಾರ್ಯದಲ್ಲಿ ತರುವಂತಹ ಆತ್ಮರಿಗೆ, ಸದಾ ತಮ್ಮನ್ನು ವಿಶ್ವಾಸ ಮತ್ತು ಪ್ರೀತಿಗೆ ಪಾತ್ರರನ್ನಾಗಿ ಮಾಡಿಕೊಳ್ಳುವ ಆತ್ಮರಿಗೆ, ಸದಾ ವ್ಯರ್ಥವನ್ನು ಸಮರ್ಥದಲ್ಲಿ ಪರಿವರ್ತನೆ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ದೇಶ-ವಿದೇಶದಲ್ಲಿ ದೂರ ಕುಳಿತಿದ್ದರೂ ಸಮೀಪ ಸನ್ಮುಖ ಕುಳಿತಿರುವ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಮತ್ತು ನಮಸ್ತೆ.**

**ದಾದಾಜೀಯವರ ಜೊತೆ:-** ತಂದೆಯ ಸೃಷ್ಟಿಯಲ್ಲಿಯೂ ನೀವಿದ್ದೀರಿ ಮತ್ತು ದೃಷ್ಟಿಯಲ್ಲಿಯೂ ನೀವಿದ್ದೀರಿ. ತಮ್ಮ ಸಹೋದರಿ ಜನಕನಿಗೆ ನೆನಪು ಪ್ರೀತಿಯನ್ನು ಕಳುಹಿಸಿ. ಇದೇ ಹೇಳಿ - ಶರೀರ ಮತ್ತು ಸೇವೆ ಎರಡನ್ನು ಸಂಭಾಲನೆ ಮಾಡುವ ಸಮತೋಲನ ಇಟ್ಟುಕೊಳ್ಳಿ. ಗಮನವಿಟ್ಟುಕೊಳ್ಳಿ ಏಕೆಂದರೆ ಮುಂದೆಯು ಸಮಯ ಬಹಳ ಸೂಕ್ಷ್ಮವಾಗಿ ಬರುತ್ತದೆ. ಶರೀರವು ಸೂಕ್ಷ್ಮ ವಾಗುತ್ತಾ ಹೋಗುತ್ತದೆ ಮತ್ತು ಸೇವೆಯು ಅಧಿಕವಾಗುತ್ತಾ ಹೋಗುತ್ತದೆ. ಈಗ ಶರೀರದಿಂದ ಬಹಳ ಕೆಲಸ ತೆಗೆದುಕೊಳ್ಳಬೇಕು. ಒಳ್ಳೆಯದು. ಓಂ ಶಾಂತಿ.

ರಿವೈಸ್ ಕೋರ್ಸ್ 18-12-1991.

***ಪ್ರತಿ ಕರ್ಮದಲ್ಲಿ ಪ್ರಾಮಾಣಿಕತೆಯ ಪ್ರಯೋಗ ಮಾಡುವುದೇ ತಪಸ್ಸು***

ತಪಸ್ವಿ ಆತ್ಮ ಅರ್ಥಾಥ್ ಸದಾ ಪ್ರಾಮಾಣಿಕವಾಗಿರುವ ಆತ್ಮ. ಪ್ರಾಮಾಣಿಕ ಆತ್ಮನ ಪ್ರತಿ ಕರ್ಮದಲ್ಲಿ ನಡೆಯುವುದರಲ್ಲಿ ಪ್ರಾಮಾಣಿಕವಾಗಿ ಇರುತ್ತಾರೆ. ವಿಶ್ವಾಸ ಪಾತ್ರರು & ನಂಬಿಕಸ್ತರಾಗಿರುತ್ತಾರೆ. ಪ್ರಾಮಾಣಿಕ ಆತ್ಮನ ಮೊದಲ ಚಿಹ್ನೆ - ಪ್ರತಿಕ್ಷಣ, ಪ್ರತಿ ಹೆಜ್ಜೆ ಶ್ರೀಮತದ ಮೇಲೆ ಸರಿಯಾಗಿ ನಡೆಯುವುದು. ಆ ಆತ್ಮನಿಗೆ ಶ್ರೀಮತ ಸದಾ ಸ್ಪಷ್ಟವಾಗಿ ಸ್ಮೃತಿಯಲ್ಲಿ ಇರುವ ಕಾರಣ ಸಮರ್ಥವಾಗಿ ಇರುತ್ತದೆ. ಇದೇ ನಂಬರ್ ವನ್ ಪ್ರಾಮಾಣಿಕತೆ ಅವರಿಗೆ ಇದು ಶ್ರೀಮತವೋ ಅಲ್ಲವೋ ಇದು ತಪ್ಪೋ ಒಪ್ಪೋ ಎಂದು ಯೋಚಿಸುವ ಅವಶ್ಯಕತೆ ಇರುವುದಿಲ್ಲ ಏಕೆಂದರೆ ಸ್ಪಷ್ಟವಾಗಿರುತ್ತದೆ. ಎರಡನೆಯ ಚಿಹ್ನೆ ಯಾವಾಗಲೂ ಯಾವ ಖಜಾನೆಯನ್ನೂ ವ್ಯರ್ಥ

ಮಾಡುವುದಿಲ್ಲ ಸರ್ವಖಜಾನೆಗಳನ್ನು, ಸರ್ವಶಕ್ತಿಗಳನ್ನು, ತನು, ಮನ ಮತ್ತು ಸ್ಥೂಲ ಧನವನ್ನು ಕೂಡ ವ್ಯರ್ಥ ಮಾಡದೆ ಕಾರ್ಯದಲ್ಲಿ ಉಪಯೋಗಿಸಿ ಒಂದಕ್ಕೆ ಪದಮದಷ್ಟು ಬೆಳೆಸಿಕೊಂಡು ಲಾಭವನ್ನು ಪಡೆದು ಸಫಲ ಮಾಡಿಕೊಳ್ಳುತ್ತಾರೆ. ಯಾವ ವಸ್ತುವಾದರೂ ಸ್ಥೂಲ ಧನವಾದರೂ, ಮನಸ್ಸಿನ ಸಂಕಲ್ಪವಾದರೂ, ತನುವಿನಿಂದ ವ್ಯರ್ಥಕರ್ಮ ಮಾಡಿದರೂ, ತನುವಿನಿಂದ ವ್ಯರ್ಥವಾಗಿ ಸಮಯವನ್ನು ಕಳೆದರೂ ವ್ಯರ್ಥದಲ್ಲಿ ಲೆಕ್ಕಿಸಲ್ಪಡುತ್ತದೆ. ಕಡಿಮೆ ಖರ್ಚು ಹೆಚ್ಚಿನ ಫಲಿತಾಂಶ ಮಾಡಿಕೊಳ್ಳಬೇಕು. ಪ್ರಗತಿಯನ್ನು ಹೊಂದಿ ಹಾರುವ ಕಲೆಯನ್ನು ಅನುಭವ ಮಾಡಿಕೊಳ್ಳಬೇಕು. ಪ್ರಾಮಾಣಿಕತೆಯಿಂದ ಸತ್ಯತೆಯ ಧೈರ್ಯದಿಂದ ವಿಶ್ವಾಸ ಪಾತ್ರರಾಗಿ ಪ್ರೇಮ ಪಾತ್ರರಾಗುತ್ತಾರೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಕರ್ಮದಲ್ಲಿ ಸದಾ ಪ್ರಾಮಾಣಿಕವಾಗಿ, (ವಿಶ್ವಾಸ ಪಾತ್ರನಾಗಿ, ನಂಬಿಕಸ್ತನಾಗಿ) ಸ್ವತಃವಾಗಿ ಶ್ರೀಮತದ ಅನುಸಾರ ನಡೆಯುವ ತಪಸ್ವಿ ಸ್ವರೂಪ.

2. ನಾನು ಪ್ರತಿಯೊಂದು ಸೆಕೆಂಡ್, ಪ್ರತಿಯೊಂದು ಹೆಜ್ಜೆ, ಶ್ರೀಮತದ ಮೇಲೆ ಸರಿಯಾಗಿ ನಡೆಯುವ ಪ್ರಾಮಾಣಿಕನು. (ಇದು ಪ್ರಾಮಾಣಿಕತೆಯ ಮೊದಲ ಚಿಹ್ನೆ)

3. ನಾನು ಶ್ರೀಮತವನ್ನು ಸದಾ ಸ್ಪಷ್ಟವಾಗಿ ಸ್ಮೃತಿಯಲ್ಲಿಟ್ಟುಕೊಂಡು ಸಮರ್ಥವಂತವಾಗಿರುವ ನಂಬರ್ ಒನ್ ಪ್ರಾಮಾಣಿಕನು.

4. ನಾನು ಸೇವೆಯಿಂದ ಲಭಿಸುವ ಸಮಯ, ಸಂಕಲ್ಪ, ಜ್ಞಾನ ಧನ, ಸರ್ವಖಜಾನೆಗಳು, ಸರ್ವಶಕ್ತಿಗಳು, ಸರ್ವ ಗುಣಗಳ ಖಜಾನೆಗಳು, ಸ್ವಯಂನ ಮತ್ತು ಇತರಾತ್ಮರ ಪ್ರತಿ ಉಪಯೋಗಿಸಿ ಮತ್ತಷ್ಟು ಬೆಳೆಸಿಕೊಂಡಿದ್ದೇನೆ. (ಇದು ಪ್ರಾಮಾಣಿಕತೆಯ ಇನ್ನೊಂದು ಚಿಹ್ನೆ)

5. ನಾನು ಯಾವ ಕಾರ್ಯದಲ್ಲಾದರೂ ಲಾಭ, ವೃದ್ಧಿ ತೋರಿಸುವ ಪ್ರಾಮಾಣಿಕ ಮ್ಯಾನೇಜರ್ ಅಥವಾ ಡೈರೆಕ್ಟರ್.

6. ನಾನು "ಕಡಿಮೆ ಖರ್ಚು ಹೆಚ್ಚು ಫಲಿತಾಂಶ" ಎಂಬ ಸ್ಲೋಗನ್ನಿನ ಸ್ಮೃತಿಯಿಂದ ತನು, ಮನ, ಧನವನ್ನು ಒಂದಕ್ಕೆ ಹತ್ತು ಪಟ್ಟು ಬೆಳೆಸಿಕೊಂಡು ಸಫಲ ಮಾಡಿಕೊಂಡಿರುವ ಪ್ರಾಮಾಣಿಕನು. (ಇದು ಕೂಡ ಪ್ರಾಮಾಣಿಕತೆಯ ಮತ್ತೊಂದು ಚಿಹ್ನೆ)

7. ನಾನು ಪ್ರಾಮಾಣಿಕತೆಯ ವಿಶೇಷತೆಗಳನ್ನೆಲ್ಲವನ್ನು ಪ್ರತಿಯೊಂದು ಕರ್ಮದಲ್ಲಿ ಪ್ರಯೋಗಿಸಿರುವ ತಪಸ್ವಿ ಸ್ವರೂಪ.

8. ನಾನು ಪ್ರಗತಿಯನ್ನು ಪಡೆಯುವ ಪ್ರಯೋಗಿಯಾಗಿ ಹಾರುವ ಕಲೆಯ ಅನುಭವವನ್ನು ಮಾಡಿಕೊಂಡಿದ್ದೇನೆ.

9. ನಾನು ಮನಸ್ಸು, ಬುದ್ಧಿ ಮತ್ತು ಎಲ್ಲಾ ವಿಧವಾದ ಪ್ರಾಮಾಣಿಕತೆ ಅರ್ಥಾತ್ ಸತ್ಯತೆಯ ಧೈರ್ಯದಿಂದ ಇರುವ ವಿಶ್ವಾಸ ಪಾತ್ರನು.